# ಮಾನಸಿಕ ಅಸ್ವಸ್ಥರಿಗೆ ಅಕ್ಕರೆಯ ಅಕ್ಷಯ ಕ್ಷೇತ್ರ



**ತಿರುಪತಿ ಎಂದಕೂಡಲೇ ನೆನಪಿಗೆ ಬರುವುದು ತಿಮ್ಮಪ್ಪ. ಕೆಲವರಿಗಷ್ಟೇ 'ಅಕ್ಷಯ ಕ್ಷೇತ್ರಂ' ಗೊತ್ತು. ಈ ಕ್ಷೇತ್ರ ಮಾನಸಿಕ ಸಮಸ್ಯೆಗಳಿಂದ ಬಳಲುತ್ತಿರುವವರ ಕಾಳಜಿಯ ಕೇಂದ್ರ.**

■ ಗಾಣಧಾಳು ಶ್ರೀಕಂಠ

ಅದು ಹೊಸ ವರ್ಷದ ಮೊದಲ ದಿನ. ಇಳಿಸಂಜೆಯ ಹೊತ್ತು. ಮರಗಿಡಗಳು ತುಂಬಿದ ಸುಂದರ ಸಸ್ಯೋದ್ಯಾನದಂತಹ ಅಂಗಳದಲ್ಲಿ ದುಂಡು ಮೇಜಿನ ಮೇಲೆ ಐವತ್ತಕ್ಕೂ ಹೆಚ್ಚು ಕೇಕ್‌ಗಳು! ಅವುಗಳ ಮೇಲೆ ಮೇಣದಬತ್ತಿ ಹಚ್ಚಿಸುತ್ತಾ ಏಕಕಾಲದಲ್ಲಿ ಎಲ್ಲರೂ 'ಹ್ಯಾಪಿ ಬರ್ತ್ ಡೇ ಟು ಯು...' ಎಂದು ಹಾಡುತ್ತಾ, ಚಪ್ಪಾಳೆ ತಟ್ಟುತ್ತಾ ಪರಸ್ಪರ ಕೇಕ್ ತಿನ್ನಿಸುತ್ತಾ ಸಂಭ್ರಮಿಸಿದರು. ಕೇಕ್ ತಿಂದವರ ಮೊಗದಲ್ಲಿ ಸಂಭ್ರಮದ ನಗೆ, ತಿನ್ನಿಸಿದವರ ಕಣ್ಣಲ್ಲಿ ಆನಂದದ ಹೂ ನಗೆ.

ಇದು ಆಂಧ್ರಪ್ರದೇಶದ ತಿರುಪತಿಯಲ್ಲಿರುವ 'ಅಕ್ಷಯ ಕ್ಷೇತ್ರಂ' ಎಂಬ, ಮಾನಸಿಕ ಸಮಸ್ಯೆಯಿಂದ ಬಳಲುತ್ತಿರುವ ಮಹಿಳೆಯರ ಆರೈಕೆ ಕೇಂದ್ರದ ಅಂಗಳದಲ್ಲಿ ಕಂಡುಬಂದ ಸಂಭ್ರಮದ ದೃಶ್ಯ. ಇಲ್ಲಿರುವವರೆಲ್ಲ ಮಾನಸಿಕ ಸಮಸ್ಯೆಯಿಂದ ಬಳಲುತ್ತಿರುವವರು, ಅನಾಥರು, ಅಂಗವಿಕಲರಾದರೂ, ಅವರೆಲ್ಲರನ್ನೂ ಪ್ರೀತಿ, ಗೌರವದಿಂದ 'ಆಶ್ರಮ ನಿವಾಸಿಗಳು' ಎಂದೇ ಕರೆಯುತ್ತಾರೆ. ಹಾಗೇ ಕಾಯುತ್ತಾರೆ. ಇದೇ ಈ ಕೇಂದ್ರದ ವೈಶಿಷ್ಟ್ಯ!

ಅಂದಹಾಗೆ, ಇವರ್‍ಯಾರಿಗೂ ತಮ್ಮ ಹುಟ್ಟಿದ ದಿನವೇ ಗೊತ್ತಿಲ್ಲ. ಹಾಗಾಗಿಯೇ ಆಶ್ರಮದ ಆಡಳಿತ ಮಂಡಳಿಯವರು ಪ್ರತಿ ವರ್ಷ ಜನವರಿ 1ರಂದು ಇವರೆಲ್ಲರನ್ನೂ ಒಟ್ಟಿಗೆ ಸೇರಿಸಿ 'ಸಾಮೂಹಿಕ ಜನ್ಮದಿನ' ಆಚರಿಸಿ ಸಂಭ್ರಮಿಸುತ್ತಾರೆ. ಇಂಥದ್ದೊಂದು ವಿಶಿಷ್ಟ ಕೇಂದ್ರ ತೋರಿಸಲಿಕ್ಕೆಂದೇ ನನ್ನನ್ನು ಕರೆದೊಯ್ದಿದ್ದು, ಆಶ್ರಮದ ಹಿತೈಷಿ ಬೆಂಗಳೂರಿನ ಸತ್ಯಪ್ರಸಾದ್.

ಎರಡು ಎಕರೆಯ ವಿಸ್ತಾರವಾದ ಆಶ್ರಮದ ಒಂದು ಭಾಗದಲ್ಲಿ ಅತಿಥಿ ಗೃಹವಿದೆ. ಎಡ ಬದಿಯಲ್ಲಿ ವೆಂಕಟೇಶ್ವರಸ್ವಾಮಿ ದೇಗುಲ. ಬಲ ಬದಿಯಲ್ಲಿ ಆಡಳಿತ ಕಚೇರಿ. ಆಟ–ಪಾಠಕ್ಕಾಗಿ ಸಣ್ಣದೊಂದು ಕುಟೀರ. ಎದುರು ಭಾಗದಲ್ಲಿ ಚಿಕಿತ್ಸಾಲಯ, ವ್ಯಾಯಾಮ ಶಾಲೆ, ಆಶ್ರಮ ನಿವಾಸಿಗಳ ವಸತಿ–ಆರೈಕೆ ಕೊಠಡಿಗಳ ಸಂಕೀರ್ಣ. ನಡುವೆ ಗಿಡ–ಮರ–ಹೂವು–ಬಳ್ಳಿಗಳ ಹಸುರುಡುಗೆಯ ಅಂಗಳ.

ನಾನು, ಸತ್ಯಪ್ರಸಾದ್ ಅವರೊಂದಿಗೆ ಈ ಸುಂದರ ಪರಿಸರದ ನಡುವೆ ಹೆಜ್ಜೆ ಹಾಕುವಾಗ, ಎದುರಿಗೆ ಸಿಕ್ಕ ಮಹಿಳೆಯರು 'ಹ್ಯಾಪಿ ನ್ಯೂ ಇಯರ್' ಎಂದು ಮುಗುಳ್ನಗುತ್ತಾ ಸಲ್ಯೂಟ್ ಮಾಡುತ್ತಿದ್ದರು. ಪಕ್ಕದಲ್ಲಿದ್ದ ಪ್ರಸಾದ್ 'ಇವರೆಲ್ಲ ವಿವಿಧ ಮಾನಸಿಕ ಸಮಸ್ಯೆಗಳಿಂದ ಬಳಲುತ್ತಿರುವವರು. ಆಶ್ರಮದ ನಿವಾಸಿಗಳು' ಎಂದು ಪರಿಚಯಿಸಿದರು. ಅವರೆಲ್ಲರ ನಗುಮೊಗದಲ್ಲಿ ಅಂಥ ಯಾವ ಕುರುಹುಗಳೂ ಕಾಣಲಿಲ್ಲ!

ಆಶ್ರಮದ ಆವರಣ ದಾಟಿ ಆಚೆಬದಿಯಲ್ಲಿನ ವೃತ್ತಾಕಾರ ವಿನ್ಯಾಸದ ಕಟ್ಟಡ ಪ್ರವೇಶಿಸಿದೆವು. ಒಳಾಂಗಣದ ಸುತ್ತಲೂ ಕೊಠಡಿಗಳು. ನಡುವೆ ಮೇಲಿಂದ ಸೂರ್ಯನ ಬೆಳಕು ಬೀಳುವ ಬೃಹತ್ ಗವಾಕ್ಷಿ. ಅದರ ಕೆಳಗೆ ಸುತ್ತಲೂ ನಿವಾಸಿಗಳ ವಿರಾಮದ ಚಟುವಟಿಕೆಗಳು.

ಸುತ್ತಲಿನ ಕೊಠಡಿಗಳನ್ನು ಪರಿಚಯಿಸುತ್ತಾ ಹೊರಟರು ನರ್ಸ್ ಬುಜ್ಜಿ ಹಾಗೂ ಶೈಲಜಾ ಟೀಚರ್. 'ಇದು ಚಿಕಿತ್ಸಾ ಕೊಠಡಿ. ನಿವಾಸಿಗಳಿಗೆ ಔಷಧೋಪಚಾರ, ಆರೋಗ್ಯ ಚಟುವಟಿಕೆಗಳು ನಡೆಯುವುದು ಇಲ್ಲೇ. ಫಿಸಿಯೊಥೆರಪಿ, ಕೌನ್ಸೆಲಿಂಗ್‌ನಿಂದ ಹಿಡಿದು ಬಹುತೇಕ ಆರೋಗ್ಯ ಸಮಸ್ಯೆಗಳಿಗೆ ಇಲ್ಲೇ ಚಿಕಿತ್ಸೆ ಕೊಡುತ್ತೇವೆ. ತುರ್ತು ಸಂದರ್ಭಗಳಲ್ಲಿ ಹೊರಗಿನಿಂದ ವೈದ್ಯರನ್ನು ಕರೆಸುತ್ತೇವೆ. ಇದಲ್ಲದೆ, ತಿಂಗಳಿಗೊಮ್ಮೆ ಎಲ್ಲರಿಗೂ ಆರೋಗ್ಯ ತಪಾಸಣೆ ನಡೆಯುತ್ತದೆ' ಎಂದು ವಿವರಿಸುತ್ತಾ ನಿವಾಸಿಗಳ ಆರೋಗ್ಯ ಕಾಳಜಿ ಪುಟಗಳನ್ನು ತೆರೆದಿಟ್ಟರು.

ಒಂದೂವರೆ ದಶಕದಿಂದ ಆಶ್ರಮದಲ್ಲಿ ನರ್ಸ್ ಆಗಿರುವ ಬುಜ್ಜಿ, ಪ್ಯಾರಾ ಮೆಡಿಕಲ್ ಕೋರ್ಸ್ ಮುಗಿಸಿ, ಇಲ್ಲಿ ನಿವಾಸಿಗಳ ಸೇವೆ ಮಾಡುತ್ತಿದ್ದಾರೆ. ನರ್ಸಿಂಗ್‌ನ ಉನ್ನತ ವ್ಯಾಸಂಗದ ಜೊತೆಗೆ, ವಿವಿಧ



ಆಟಿಕೆಗಳ ಮೂಲಕ ಪಾಠ ಹೇಳುತ್ತಿರುವ ಶಿಕ್ಷಕಿ ಶೈಲಜಾ